**ತತ್ರ ತಾರಾಥಮೂಲತ್ವಂ ಸರ್ವಶಾಸ್ತ್ರಸ್ಯ ಚೇಷ್ಯತೇ ।**
**ಸರ್ವತ್ರಾನುಗತತ್ವೇನ ಪೃಥಗೋಂಕ್ರಿಯತೇಽಖಿಲೈಃ ॥**

**ಅನ್ವಯಾರ್ಥ :**

ತಾರ-ಅಥಮೂಲತ್ವಂ= ಸೂತ್ರದ ಪ್ರಾರಂಭದಲ್ಲಿ ಉಚ್ಚರಿಸಲ್ಪಡುವ 'ಓಂ'ಕಾರ ಮತ್ತು 'ಅಥ' ಎಂಬ ಶಬ್ದಗಳು, ತತ್ರ= ಪ್ರಥಮಸೂತ್ರದ ಭಾಗವಾಗಿಯೂ, ಸರ್ವಶಾಸ್ತ್ರಸ್ಯ= ಸಮಗ್ರ ಬ್ರಹ್ಮಸೂತ್ರಗಳ ಅಂಗವಾಗಿಯೂ, ಇಷ್ಯತೇ= ಸೂತ್ರಕಾರರಾದ ವೇದವ್ಯಾಸರಿಗೆ ಅಭಿಮತವಾಗಿದೆ.

ಅಖಿಲೈಃ= ಎಲ್ಲಾ ಸೂತ್ರಕಾರರಿಂದಲೂ, ಸರ್ವತ್ರ= ಪ್ರತಿಯೊಂದು ಸೂತ್ರಗಳಲ್ಲೂ, ಅನುಗತತ್ವೇನ= ಅನುಸ್ಯೂತವಾಗಿ ಉಚ್ಚರಿಸಲ್ಪಡಬೇಕೆಂಬ ಅಭಿಪ್ರಾಯದಿಮದ, ಪೃಥಕ್= ಸೂತ್ರದೊಂದಿಗೆ ಸೇರಿಸದೆ ಪ್ರತ್ಯೇಕವಾಗಿ, ಓಂಕ್ರಿಯತೇ= ಓಂಕಾರವು ಉಚ್ಚರಿಸಲ್ಪಡುತ್ತದೆ.

**ಭಾವಾರ್ಥ :**

1. ಶ್ರೀವೇದವ್ಯಾಸರು ಸೂತ್ರದ ಆರಂಭದಲ್ಲಿ ಓಂ ಮತ್ತು ಅಥ ಶಬ್ದಗಳನ್ನು ಉಚ್ಚರಿಸಿದ್ದಾರೆ. ಅವೆರಡೂ ಮೊದಲನೆಯ ಸೂತ್ರದಲ್ಲಿ ಘಟಕವಾದ ಒಂದು ಭಾಗ. ಅವೆರಡಕ್ಕೂ ಅರ್ಥವನ್ನು ಹೇಳಿ ಆ ಅರ್ಥವನ್ನು ಸೂತ್ರದಲ್ಲಿರುವ ಇತರ ಶಬ್ದಗಳ ಅರ್ಥದೊಂದಿಗೆ ಸಮನ್ವಯ ಮಾಡಬೇಕು.

ಇಷ್ಟೇ ಅಲ್ಲದೆ, ಅವು ಪ್ರಥಮ ಸೂತ್ರಕ್ಕೆ ಮಾತ್ರ ಸಂಬಂಧ ಪಡದೆ ಸಮಗ್ರ ಬ್ರಹ್ಮಸೂತ್ರಗಳಿಗೆ ಮಂಗಲಾಚರಣೆಯ ರೂಪವಾಗಿಯೂ ಸಂಬಂಧಿಸಿದೆ. ಓಂಕಾರ ಮತ್ತು ಅಥ ಶಬ್ದಗಳು ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಂದ ಹೊರಹೊಮ್ಮಿವೆ. ಆದ್ದರಿಂದ ಅದರ ಉಚ್ಚಾರಣೆ ಶಾಸ್ತ್ರದ ಮಂಗಲ ರೂಪವಾಗಿದೆ.

ಹೀಗೆ ಓಂಕಾರ ಮತ್ತು ಅಥಶಬ್ದಗಳ ಪಾತ್ರ ಎರಡು ವಿಧವಾಗಿದೆ–

ಅ. ಪ್ರಥಮ ಸೂತ್ರದೊಂದಿಗೆ ಅರ್ಥತಃ ಸಂಬಂಧ.

ಆ. ಸಮಗ್ರ ಸೂತ್ರಕ್ಕೆ ಮಂಗಲರೂಪವಾಗಿ ಸಂಬಂಧ.

ಶುಭಕಾರ್ಯಕ್ಕೆ ಹೊರಟಾಗ ನೀರಿನ ಕೊಡ ಹೊತ್ತ ಸುಮಂಗಲಿಯರ ದರ್ಶನ ಶುಭಶಕುನ. ಅಲ್ಲಿ ಮಡಿಕೆಯ ನೀರು ಆ ಮಹಿಳೆಯರ ಗೃಹಕೃತ್ಯಕ್ಕೆ ಉಪಯೋಗವಾಗುವ ಜೊತೆ ಅದರ ದರ್ಶನ ಮಾತ್ರದಿಂದ ನಮ್ಮ ಕಾರ್ಯಸಿದ್ಧಿಯೂ ಸೂಚಿತವಾಗುತ್ತದೆ. ಇದರಂತೆ ಈ ಎರಡು ಶಬ್ದಗಳ ಪಾತ್ರವಿದೆ.

2. 'ಅಥಾತಃ ಬ್ರಹ್ಮಜಿಜ್ಞಾಸಾ' ಎಂಬ ಮೊದಲ ಸೂತ್ರದಲ್ಲಿ 'ಅಥ' ಮತ್ತು 'ಅತಃ' ಶಬ್ದಗಳನ್ನು ಸಂಧಿ ಮಾಡಿ ಹೇಳಲಾಗಿದೆ. ಓಂಕಾರವು ಮೊದಲ ಸೂತ್ರಾರ್ಥದೊಂದಿಗೆ ಅನ್ವಯಿಸುವುದಾದಲ್ಲಿ ಅದನ್ನೂ ಜೊತೆ ಸೇರಿಸಿ 'ಓಮಥಾತೋ….' ಎನ್ನಬೇಕಾಗಿತ್ತು. ವ್ಯಾಸರು ಹಾಗೇಕೆ ಮಾಡಿಲ್ಲ?

ಈ ಪ್ರಶ್ನೆಗೆ ಪ್ರಕೃತ ಶ್ಲೋಕದ ಉತ್ತರಾರ್ಧ ಉತ್ತರ ನೀಡಿದೆ– ಓಂಕಾರವು 'ಅಥ' ಮತ್ತು 'ಅತಃ' ಶಬ್ದಗಳಂತಲ್ಲ. ಆ ಎರಡು ಶಬ್ದಗಳು ಮೊದಲ ಸೂತ್ರಕ್ಕೆ ಮಾತ್ರ ಸಂಬಂಧಿಸಿವೆ. ಮುಂದಿನ ಒಂದೊಂದು ಸೂತ್ರಗಳಲ್ಲೂ ಅವುಗಳ ಅನುವೃತ್ತಿ ಇಲ್ಲ. ಆದರೆ, ಓಂಕಾರ ಹಾಗಲ್ಲ. ಮುಂದಿನ ಎಲ್ಲಾ ಸೂತ್ರಗಳಲ್ಲೂ ಅದನ್ನು ಸೇರಿಸಿಕೊಳ್ಳಬೇಕು. ಈ ಕಾರಣಕ್ಕಾಗಿ ವ್ಯಾಸರು ಓಂಕಾರವನ್ನು ಸಂಧಿ ಮಾಡದೆ ಪ್ರತ್ಯೇಕವಾಗಿ ಉಚ್ಚರಿಸಿದ್ದಾರೆ.